Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



Rtn. Francesco Arezzo
RI President




Rtn. Palaksha K.
Dist. Governor



Rtn. PHF. I. Narayana
Asst. Governor



Rtn. Koushik Yadiyal
Zonal Lieutenant



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura



40h year of Service and Fellowship

Volume 40 Issue - 28 15th January 2026

## ದೇವಸ್ಥಾನ ನಿರ್ಮಾಣ

ಮುಖ್ಯ ಅತಿಥಿ : ಶ್ರೀ ದಿನೇಶ್ ಹೆಗ್ಡೆ
ಇಂಜಿನಿಯರ್, ಕುಂದಾಪುರ

Time : 7.00 p.m.
Venue : Hotel Shivaprasad Grand, Kundapura

## ಸಂಪಾದಕೀಯ :



ರೋಟರಿ ಮಿತ್ರರೇ, ಇದೀಗ ಜನವರಿ ತಿಂಗಳು ನಮ್ಮ ನಮ್ಮ ಮನೆಯಲ್ಲಿರುವ SSLC PUC ಓದುತ್ತಿರುವ ಮಕ್ಕಳಿಗೆಲ್ಲ ಮುಂಬರುವ ಪರೀಕ್ಷೆಯ ಜ್ವರ ಅಂದರೆ ಏನಾಗುವುದೋ ಎಷ್ಟು ಮಾರ್ಕು ಬರುವುದೋ ಎಂದೆಲ್ಲಾ ತಲೆ ಬಿಸಿ. ಮಕ್ಕಳಿಗಿಂತಲೂ ಜಾಸ್ತಿ ಅವರ ಹೆತ್ತವರಿಗೆ!. ನಮ್ಮ ರೋಟರಿ ಕುಂದಾಪುರ ದಕ್ಷಿಣದ ಕುಟುಂಬದಲ್ಲಿ ಪರೀಕ್ಷೆ ಎದುರಿಸುವ ಎಲ್ಲಾ ಮಕ್ಕಳಿಗೆ ಶುಭವಾಗಲಿ ಹಾಗೂ ಅತ್ಯುತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿ ಎಂದು ಹಾರೈಸುತ್ತೇವೆ ಹಾಗೂ ಜೊತೆಗೆ ಆ ದೇವರಲ್ಲಿ ಪ್ರಾರ್ಥಿಸುತ್ತೇವೆ. ಅಂತೆಯೇ ಉದ್ಯಮಿಗಳಿಗೆ GST Annual return ಅದೂ 2024–25 ರದ್ದು 2025 – 26 accounts fimalizing ತಲೆಬಿಸಿ, ಬ್ಯಾಂಕ್‌ಗಳಿಂದ pressure, debtors ಗಳಿಂದ ಸರಿಯಾದ ಸಮಯದಲ್ಲಿ ಹಣ ಬರದೇ ಇರುವ tension ಇವುಗಳೆಲ್ಲ ಜನವರಿಯಿಂದ ಮಾರ್ಚ್ ಕೊನೆಯವರೆಗೆ ಸ್ವಲ್ಪ ಜಾಸ್ತಿ ಇರುವ ಮಾಮೂಲಿ ಸಂಗತಿ. ಎಲ್ಲರೂ ಈ ಸೀಸನ್‌ನಲ್ಲಿ ತಮ್ಮ ತಮ್ಮ ಅಂದುಕೊಂಡ ಯೋಜನೆಗಳನ್ನು, ಕಾರ್ಯಸೂಚಿಗಳನ್ನು, ಸಮಸ್ಯೆಗಳನ್ನು ಗೆದ್ದು ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ. **– ರೊ. ರಮಾನಂದ ಕಾರಂತ**

## ವಾರದ ಸಭೆಯ ವರದಿ




ತಾ. 08.01.2026 ರಂದು ನಮ್ಮ ವಾರದ ಸಭೆಯು ಸದಸ್ಯರುಗಳ ಜೀವನಾನುಭವದ ನಡುವೆ ನಡೆದಿರತಕ್ಕ ನೈಜ ಹಾಸ್ಯ ಸನ್ನಿವೇಶಗಳ ಮೆಲುಕುಹಾಕುತ್ತಾ ಸಭಾಸದರನ್ನು ನಗೆಯ ಕಡಲಲ್ಲಿ ತೇಲಾಡಿಸುತ್ತಾ ಕಳೆದ ವಿನೋದಮಯ ಸಂಜೆಯಾಗಿತ್ತು. ರೊ. ಸತ್ಯನಾರಾಯಣ ಪುರಾಣಿಕ್, ರೊ. ಡಾ. ಆದರ್ಶ ಹೆಬ್ಬಾರ್, ರೊ. ರಮಾನಂದ ಕಾರಂತ್, ರೊ. ಸಚಿನ್ ನಕ್ಕತ್ತಾಯ, ರೊ. ಜೆರಾಲ್ಡ್ ಕ್ರಾಸ್ತಾ ಮುಂತಾದವರು ತಮ್ಮ ಅನುಭವಗಳನ್ನು ಸದಸ್ಯರೊಂದಿಗೆ ಹಂಚಿಕೊಂಡರು. ಆಗಮಿಸಿದ ಸದಸ್ಯರುಗಳನ್ನು ರೊ. ಸಚಿನ್ ನಕ್ಕತಾಯ ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ.ಮನೋಹರ್ ಭಟ್ ವಾರದ ಚಿಂತನೆಯನ್ನು ಮಂಡಿಸಿದರು ರೊ. ಜಿ. ಶ್ರೀಧರ್ ಶೆಟ್ಟಿ ರೋಟರಿ ಮಾಹಿತಿ ತಿಳಿಸಿದರು. ರೊ. ಶ್ರೀನಿವಾಸ ಶೇಟ್ ಪ್ರಾರ್ಥನೆ ಸಲ್ಲಿಸಿದರು. ರೊ. ರಮಾನಂದ ಕಾರಂತ್ ಸಭೆಯ ಕೊನೆಯಲ್ಲಿ ಹಾಸ್ಯವನ್ನು ನೆರವೇರಿಸಿದರು. ರೊ. ದೋಮ ಚಂದ್ರಶೇಖರ್ ಅವರು ಸರ್ವರಿಗೂ ಧನ್ಯವಾದಗಳನ್ನು ಅರ್ಪಿಸಿದರು.

## ನೇತ್ರ ತಪಾಸಣೆ ಉಚಿತ ಶಿಬಿರ



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿವಾರಣಾ ವಿಭಾಗ, ಸಾರ್ವಜನಿಕ ಆಸ್ಪತ್ರೆ ಕುಂದಾಪುರ, ನಮ್ಮ ಕ್ಲಿನಿಕ್ ಸಹಯೋಗದೊಂದಿಗೆ ಪಾರ್ವತಿ ಮಹಾಬಲ ಶೆಟ್ಟಿ ಚಾರಿಟೆಬಲ್ ಟ್ರಸ್ಟ್ ಕುಂದೇಶ್ವರ ಯುವ ಜನ ಸಭಾ, ಕುಂದೇಶ್ವರ ಫ್ರೆಂಡ್ಸ್ ಹಾಗೂ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಆಶ್ರಯದಲ್ಲಿ ನೇತ್ರ ತಪಾಸಣೆ ಉಚಿತ ಶಿಬಿರ ಕುಂದೇಶ್ವರ ರಸ್ತೆಯ ರಾಘವೇಂದ್ರ ಕಲ್ಯಾಣ ಮಂಟಪದಲ್ಲಿ ಜರುಗಿತು.

ತಾಲೂಕು ಆರೋಗ್ಯಾಧಿಕಾರಿ ಡಾ. ಪ್ರೇಮಾನಂದ ಶಿಬಿರ ಉದ್ಘಾಟಿಸಿದರು. ಪಾರ್ವತಿ ಮಹಾಬಲ

ಶೆಟ್ಟಿ ಟ್ರಸ್ಟ್‌ನ ವೈದ್ಯಾಧಿಕಾರಿ ಡಾ. ರಶ್ಮಿ, ನಮ್ಮ ಕ್ಲಿನಿಕ್‌ನ ವೈದ್ಯೆ ಡಾ. ಶರಣ್ಯ ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಕುಂದೇಶ್ವರ ಯುವಜನ ಸಭಾದ ಗೌರವಾಧ್ಯಕ್ಷ ರೊ. ಸತೀಶ್ ಶೆಟ್ಟಿ ಮಾತನಾಡಿದರು. ಸತೀಶ್, ರವಿರಾಜ್ ಕುಂದೇಶ್ವರ ಉಪಸ್ಥಿತರಿದ್ದರು.

ರೋಟರಿ ಕುಂದಾಪುರ ದಕ್ಷಿಣದ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಕಾರ್ಯಕ್ರಮ ನಿರ್ವಹಿಸಿದರು. ನಾಗರಾಜ್ ವಂದಿಸಿದರು. ಸಿಎಚ್‌ಒ ಮೇದಿನಿ ಮತ್ತು ಆಶಾ ಕಾರ್ಯಕರ್ತೆಯರು ಸಹಕರಿಸಿದರು.



## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು–113

**ಸೂಕ್ಷ್ಮ ಶರೀರ ಭಾಗ – 3**

ಸೂಕ್ಷ್ಮ ಶರೀರವು ಸುಪ್ತ ಅನಿಸಿಕೆಗಳನ್ನು ಹೊಂದಿರುತ್ತದೆ. ನಾವು ನಿತ್ಯವೂ ಏನೋ ಕೆಲಸ ಮಾಡುತ್ತೇವೆ, ಯಾವುದೋ ಅನುಭವ ಪಡೆಯುತ್ತೇವೆ. ಕೆಲಸ ಮತ್ತು ಅನುಭವ ಎರಡೂ ಕೊನೆಯಾಗುತ್ತವೆ, ನಾವೂ ಎಲ್ಲವನ್ನೂ ಮರೆಯುತ್ತೇವೆ. ಆದರೆ ಇವು ಮನಸ್ಸಿನೊಳಗೆ ಅನಿಸಿಕೆಗಳ ಮಾದರಿಯಲ್ಲಿ ಅಚ್ಚೊತ್ತುತ್ತವೆ. ಇವನ್ನೇ ವಾಸನಾ ಎನ್ನುವುದು. ಭಾರತವು ಮನಃಶಾಸ್ತ್ರವನ್ನು ಆಳವಾಗಿ ಅಧ್ಯಯನ ಮಾಡಿ, ವಾಸನಾ ಅಥವಾ ಸಂಸ್ಕಾರಗಳನ್ನು ಕಂಡುಹಿಡಿಯಿತು. ಒಂದು ಯಂತ್ರಕ್ಕೆ ಯಾವುದೇ ಸಂಸ್ಕಾರ ಇರುವುದಿಲ್ಲ. ಅದು ಗದ್ದೆ ಉಳುವುದು, ಹೀಗೆ ಹಲವು ಕಾರ್ಯಗಳನ್ನು ಮಾಡುತ್ತದೆ, ಒಂದು ದಿನ ಯಾವ ಗುರುತೂ ಇಲ್ಲದಂತೆ ಗುಜರಿ ಅಂಗಡಿ ಸೇರುತ್ತದೆ. ಆದರೆ ಮನುಷ್ಯ ಕೆಲಸ ಮಾಡಿದಾಗ ಅದರ ಗುರುತುಗಳನ್ನು ಮನಸ್ಸಿನಲ್ಲಿ ಬಿಟ್ಟಿರುತ್ತಾನೆ. ಸಾವಿನ ಸಮಯದಲ್ಲಿ ಸ್ಥೂಲಶರೀರವು ಕರಗಿ ಹೋಗುವುದು, ಆದರೆ ಯಂತ್ರದಂತೆ ಯಾವುದೇ ಗುರುತು ಬಿಡದೆ ನಾಶವಾಗದೆ, ಮಾನವನ ಸೂಕ್ಷ್ಮ ಶರೀರವು ಸಂಸ್ಕಾರ, ಭಾವನೆಗಳ ಜೊತೆ ಉಳಿದು ಪುನಃ ಪ್ರಕಟಗೊಳ್ಳಲು ಹೊಸ ಸ್ಥೂಲ ಹೊದಿಕೆ ಮತ್ತು ಹೊಸ ಪರಿಸ್ಥಿತಿಗಾಗಿ ಕಾಯುತ್ತದೆ. ಈ ಸಂಸ್ಕಾರಗಳ ಅಚ್ಚೊತ್ತಿಕೊಂಡಿರುವ ಸೂಕ್ಷ್ಮ ಶರೀರವು ಮಾನವನ ವ್ಯಕ್ತಿತ್ವ ದಲ್ಲಿ ಅತಿ ಮುಖ್ಯವಾದ ಅಂಶವಾಗಿದೆ. ಈ ಅಚ್ಚಾಗಿರುವ ಭಾವನೆ, ಅನಿಸಿಕೆಗಳು ಮಾನವನ ಒಳ್ಳೆಯ, ಕೆಟ್ಟ ಗುಣಗಳ ಮೇಲೆ ನೇರ ಪರಿಣಾಮ ಹೊಂದಿರುತ್ತವೆ ಹಾಗೂ ಈ ಭಾವನೆಗಳಲ್ಲಿ ಬದಲಾವಣೆ ಮಾಡಿಕೊಳ್ಳುವುದರಿಂದ ನಮ್ಮ ವ್ಯಕ್ತಿತ್ವ ವನ್ನು ನಾವು ಎತ್ತರಕ್ಕೆ ಕೊಂಡೊಯ್ಯಬಹುದು. ಆದ್ದರಿಂದ ಸಂಸ್ಕಾರವು ಸೂಕ್ಷ್ಮ ಶರೀರದ ಬಹು ಮುಖ್ಯ ಅಂಗವೇ ಆಗಿದ್ದು ವೇದಾಂತದ ಪ್ರಕಾರ ಅದೇ ನಿಜವಾದ ಮನುಷ್ಯ. ಸ್ಥೂಲ ಶರೀರವನ್ನು ಒಂದು ಚೀಲಕ್ಕೆ ಹೋಲಿಸಲಾಗಿದ್ದು ಅದರೊಳಗೆ, ಕವಚದೊಳಗಿನ ಕತ್ತಿಯಂತೆ ಸೂಕ್ಷ್ಮ ಶರೀರವು ತಾತ್ಕಾಲಿಕವಾಗಿ ವಾಸಿಸುತ್ತದೆ. ನಿಜವಾದ ಮನುಷ್ಯ ಎಂದರೆ ಇಂದ್ರಿಯ, ನರ ಮತ್ತು ಮನೋವ್ಯವಸ್ಥೆಗಳನ್ನೊಳಗೊಂಡ ಸೂಕ್ಷ್ಮ ಶರೀರವೇ. ಬಾಹ್ಯ ಸ್ಥೂಲಶರೀರವು ಕೇವಲ ಒಂದು ನಕಲಿ ವ್ಯಕ್ತಿತ್ವವಲ್ಲದೆ ಮತ್ತೇನಿಲ್ಲ.

ಆತ್ಮಕ್ಕೆ ಹಿಂದಿನ ಕರ್ಮ ಫಲಗಳ ಅನುಭವ ವಾಗುವುದು ಸೂಕ್ಷ್ಮಶರೀರದಿಂದಲೇ. ಹಿಂದೆ ಹೇಳಿದಂತೆ ಎಲ್ಲ ಒಳ್ಳೆಯ, ಕೆಟ್ಟ ಕರ್ಮಗಳು ಸಂಸ್ಕಾರದಲ್ಲಿ ಅಚ್ಚಾಗಿರುತ್ತವೆ. ಅವುಗಳು ಸೂಕ್ಷ್ಮ ಶರೀರದ ಆಳದಲ್ಲಿ ನಮ್ಮ ಜೀವನದ ಒಳ್ಳೆಯ ಕೆಟ್ಟ ಅನುಭವಗಳಾಗಿ ಸೂಕ್ಷ್ಮ ಶರೀರದ ಪ್ರಜ್ಞಾಹೀನ ಎಳೆಗಳಲ್ಲಿ ಅಡಗಿದ್ದು, ಪುನಃ ನಮ್ಮ ಜೀವನದಲ್ಲಿ ಅದೇ ಒಳ್ಳೆಯದ್ದೋ, ಕೆಟ್ಟದ್ದೋ ಅನುಭವ ನೀಡುತ್ತದೆ. ಆದ್ದರಿಂದ ನಾವು ಕೆಟ್ಟ ಸಂಸ್ಕಾರಗಳಿಂದ ನಮ್ಮನ್ನು ರಕ್ಷಿಸಿಕೊಂಡು ಪ್ರಜ್ಞಾಪೂರ್ವಕವಾಗಿ ಸದ್ಗುಣಗಳ ಸಂಸ್ಕಾರಗಳನ್ನು ರೂಢಿಸಿಕೊಳ್ಳಬೇಕು. ಆಗಲೇ ನಾವು ಸದ್ವ್ಯಕ್ತಿತ್ವವನ್ನ ಕಟ್ಟಿಕೊಳ್ಳಲು ಸಾಧ್ಯ. ನಾವು ಕೆಲವು ಬಾಹ್ಯ ಕರ್ಮಗಳನ್ನು ಬಿಟ್ಟರೂ ಅವುಗಳು ಮನಸ್ಸಿನೊಳಗೆ ಅಚ್ಚೊತ್ತಿಯೇ ತೀರುತ್ತವೆ.

ಈ ವಿದ್ಯಮಾನವನ್ನು ಚಿತ್ರಿಸುತ್ತಾ ಹಿಂದಿಯ ಒಂದು ನಾಣ್ಣುಡಿಯಲ್ಲಿ ಹೀಗೆ ಹೇಳಿದೆ: "ಕಂಬಲ್ ಛೋಡ್ತಾ ನಹೀಂ" ಅಂದರೆ ಕಂಬಳಿ ನನ್ನನ್ನು ಬಿಡುತ್ತಿಲ್ಲ. ಒಂದು ನದಿಯಲ್ಲಿ ಕಪ್ಪಗಿರುವ ಕಂಬಳಿಯಂತೆ ಕಾಣುವ ಏನೋ ಒಂದು ತೇಲುತ್ತಾ ಹೋಗುತ್ತಿರುತ್ತದೆ. ಒಬ್ಬ ಮನುಷ್ಯ ಅದು ಕಂಬಳಿ ಎಂದು ಕೊಂಡು ಸ್ನೇಹಿತನಿಗೆ ಅದನ್ನು ನದಿಯ ತೀರಕ್ಕೆ ತರುವುದಾಗಿ ಹೇಳಿ ನದಿಗೆ ಹಾರುತ್ತಾನೆ. ಕೆಲ ಸಮಯ ಕಳೆಯಿತು, ಸ್ನೇಹಿತ ನೋಡುತ್ತಿದ್ದ, ನದಿಗೆ ಹಾರಿದವ ಬರುತ್ತಿಲ್ಲ. ಅವನು ಯೋಚನೆಗೀಡಾಗಿ ಏನಾಯಿತು, ಏಕೆ ಹೊರಗೆ ಬರುತ್ತಿಲ್ಲ? ಎಂದು ಕೂಗಿದ. ನದಿಯಲ್ಲಿದ್ದ ಮನುಷ್ಯ ಹತಾಶನಾಗಿ ಅಳುತ್ತಾ ಕಿರುಚಿದ, "ಅಯ್ಯೋ, ನನಗೆ ಬರಲಾಗುತ್ತಿಲ್ಲ. ಈ ಕಂಬಳಿ ನನ್ನನ್ನು ಬಿಡುತ್ತಿಲ್ಲ, ನಾನು ಅದನ್ನು ಬಿಡಲು ಪ್ರಯತ್ನಿಸುತ್ತಿದ್ದೇನೆ ಆದರೆ ಅದು ನನ್ನನ್ನು ಬಿಡುತ್ತಿಲ್ಲ." ಅವನು ಅಂದುಕೊಂಡಂತೆ ಅದು ಕಂಬಳಿಯಾಗಿರಲಿಲ್ಲ. ಅದು ಕಪ್ಪು ಕರಡಿಯಾಗಿತ್ತು. ಕಂಬಳಿಯೆಂದುಕೊಂಡು ಕರಡಿಯನ್ನು ಹಿಡಿದರೆ ಅದೇ ನಮ್ಮನ್ನು ಹಿಡಿದು ಕೊಳ್ಳುತ್ತದೆ.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ ಮಧ್ಯಮಾಮ್।ಅಸ್ಮದಾಚಾರ್ಯ ಪರ್ಯಂತಾಮ್ ವಂದೇ ಗುರುಪರಂಪರಾಮ್॥

ಶ್ರೀ ಗುರುಚರಣಾರವಿಂದಾರ್ಪಣಮಸ್ತು...


Rtn. Dr. S. N. Padiyar 1985-86 & 1986-87


Rtn. B. Arun Kumar Shetty 1987-88


Rtn. Dr. H. Rammohan 1988-89


Rtn. K. Shridhar Kamath 1989-90


Rtn. Dr. Anand Nayak 1990-91


Rtn. B. Ramachandra Prabhu 1991-92


Rtn. G. Santhosh Kumar Shetty 1992-93


Rtn. Dr. H. A. Vishweshwar 1993-94


Rtn. Dr. H. R. Hebbar 1994-95


Rtn. K. T. Surendranath 1995-96


Rtn. B. C. Somayaji 1997-98


Rtn. S. Subraya Halambi 1999-2000


Rtn. K. Seetharama Nackathaya 2001-02


Rtn. Dr. Umesh Puthran 2003-04


Rtn. A. Shantharam Pai 2005-06

## Rotary information:

### ROTARY FOUNDATION

The Rotary Foundation was started in 1917 by Arch C. Klumph, sixth R. President, first as an Endowment Fund with an initial amount of US. $ 26.50. He convinced a Rotary convention of the need for an endowment for "doing good in the world" in charitable, educational or other avenues of service.

In 1928, the Rotary Foundation gained further strength with the appointment of the first trustees in the Minneapolis convention. In 1931, they adopted a declaration of trust and the Rotary foundation is governed by 13 trustees who are responsible for managing all funds and properties, administering, evaluating, developing and initiating Programmes and promoting the Foundation. Trustees are appointed by the President of R. I., subject to confirmation by the board of Directors and Four of the Trustees must be past R. I. Presidents.

Compiled by : **Rtn. Krishna Kanchan**

## Thought for the week...

ಎಲ್ಲಾ ನಮ್ಮವರು ಎನ್ನುವುದು **ಭ್ರಮೆ**..!
ನಾನು ನಂದು ಅನ್ನುವುದು **ಸ್ವಾರ್ಥ**..!
ಅವರು ನನ್ನವರು ಎಂಬುದು ಶುದ್ಧ **ಸುಳ್ಳು**..!
ನಿನಗಾಗಿ ನೀನು ಎಂಬುದಷ್ಟೇ **ಸತ್ಯ**..!
ಯಾರಿಂದಲೂ ಏನನ್ನೂ ಬಯಸದೆ ಇರುವುದು **ಸೌಖ್ಯ**..!

ನಾವು ಜೀವಿಸುವುದಕ್ಕಾಗಿ ಸಂಪಾದಿಸಬೇಕೇ ಹೊರತು
ಸಂಪಾದನೆಯೇ ಜೀವನ ಆಗಬಾರದು
– ಸರ್. ಎಂ. ವಿಶ್ವೇಶ್ವರಯ್ಯ

## ಹುಟ್ಟುಹಬ್ಬದ ಶುಭಾಶಯಗಳು



ರೊ. ಡಾ. ಉಮೇಶ್ ಪುತ್ರನ್
ದಿನಾಂಕ : ಜನವರಿ 21
ಮೊಬೈಲ್ : 9448068168

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Dr. Rammohan H.**
**Mob. : 9844134023**

For Private Circulation only

Email id – rotaryclub.kundapurasouth@gmail.com


Rtn. S. Sadananda Chatra 1996-97


Rtn. K. Suresh Kamath 1998-99


Rtn. S. Vijaya Shetty 2000-01


Rtn. U. S. Shenoy 2002-03


Rtn. Dr. B. V. Udupa 2004-05


Rtn. K. Shantharam Prabhu 2006-07


Rtn. T. Raghavendra Hatwar 2007-08


Rtn. K. Shankar 2008-09


Rtn. S. Jayakar Shetty 2009-10


Rtn. K. K. Kanchan 2010-11


Rtn. Abhinandan A. Shetty 2011-12


Rtn. Vivian Crasto 2012-13


Rtn. G. Shreedhar Shetty 2013-14


Rtn. K. P. Bhat 2014-15


Rtn. P. Vasudeva Karanth 2015-16


Rtn. Aouzline F. Rebello 2016-17


Rtn. J. Srinath Rao 2017-18


Rtn. Johnson D' Almeida 2018-19


Rtn.Devaraj 2019-20


Rtn. Dr. Uttam Kumar Shetty 2020-21


Rtn.Mahendr Shetty 2021-22


Rtn.Sathyanarayana Puranik 2022-23


Rtn.Suresh Mallya 2023-24


Rtn. Judith Mendonca 2024-25